Date : 12.06.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಆರ್.ಬಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ 2 ನೇ ಅರ್ಜಿದಾರನಿದ್ದು, 1 ನೇ ಅರ್ಜಿದಾರರು ನನ್ನ ತಾಯಿಯಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ಸರಿಯಿರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ ಮದಕರಿಪುರ ಗ್ರಾಮದ ಸರ್ವೆ ನಂ. 101/1 ಆಸ್ತಿಯ ಬಗ್ಗೆ ಇರುವ 1 ಪಹಣಿ ಪ್ರತಿ ಮತ್ತು ಸದರಿ ಆಸ್ತಿಯಲ್ಲಿ ಎದುರುದಾರರು ಗೋಪುರ ಅಳವಡಿಕೆ ಮಾಡಿ ವಿದ್ಯುತ್ ಲೈನ್ ಎಳೆದ ಬಾಬ್ತು ನನಗೆ ಪರಿಹಾರ ನೀಡಿದ ಬಗ್ಗೆ ತೋರಿಸಲು ಇರುವ ಒಂದು ದಾಖಲೆಯ ಪ್ರತಿ ಮತ್ತು ಎದುರುದಾರರು ನನಗೆ ಕಳುಹಿಸಿದ ಒಂದು ಪತ್ರದ ನಕಲು ಪ್ರತಿ ಮತ್ತು ಚಿತ್ರದುರ್ಗ ಉಪನೊಂದಣಾಧಿಕಾರಿಗಳು ಅವರ ವ್ಯಾಪ್ತಿಯಲ್ಲಿ ಬರುವ ಕೃಷಿ ಜಮೀನಿನ ಮಾರ್ಗಸೂಚಿ ದರಪಟ್ಟಿಯ ಬಗ್ಗೆ ನೀಡಿದ ದಾಖಲೆಯ ನಕಲು ದೃಢೀಕೃತ ಪ್ರತಿ, ಸದರಿ ಗ್ರಾಮದ ಬಗ್ಗೆ ಇರುವ ನಕಾಶೆಯ ದೃಢೀಕೃತ ಪ್ರತಿ, ದಿಃ 11.01.2021 ರಂದು ರಾ.ಹೆ ಪ್ರಾಧಿಕಾರದವರು ನೀಡಿದ ನಿರಾಪೇಕ್ಷಣ ಪತ್ರದ ನಕಲು ದೃಢೀಕೃತ ಪ್ರತಿ, ದಿಃ 05.11.2022 ರಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಎದುರುದಾರರಿಗೆ ಕಳುಹಿಸಿದ ಪತ್ರದ ದೃಢೀಕೃತ ಪ್ರತಿ ಮತ್ತು ದಿಃ 19.04.2017 ರಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಹೊರಡಿಸಿದ ಅನುಬಂಧ–5 ರ 3 ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 10 ಎಂದು, ದಿಃ 26.11.2025, 31.05.2022 ರ ದಿನಾಂಕದಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳು ನೀಡಿದ ಭೂಪರಿವರ್ತನೆಯ ಆದೇಶದ 2 ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–11 ಮತ್ತು 12 ಎಂದು, ದಿಃ 31.08.2023 ರ ದಿನಾಂಕದಂದು ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದವರು ಮದಕರಿಪುರ ಗ್ರಾಮದ ಸರ್ವೆ ನಂ. 60/5 ಆಸ್ತಿಯ ಬಗ್ಗೆ ನೀಡಿದ ಅನುಮೋದನೆ ಪತ್ರ ಮತ್ತು ನಕಾಶೆ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–13 ಮತ್ತು 13(ಎ) ಎಂದು, ಅದೇ ರೀತಿ ಜಿಲ್ಲಾಧಿಕಾರಿಗಳು ಮದಕರಿ ಪುರ ಗ್ರಾಮದ ಸರ್ವೆ ನಂ. 59/4 ಮತ್ತು 57/5 ಆಸ್ತಿಯ ಬಗ್ಗೆ ನೀಡಿದ ಅನುಮೋದನೆ ಪತ್ರ ಮತ್ತು ನಕಾಶೆಯ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–14, 14(ಎ), 15 ಮತ್ತು 15(ಎ) ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – 1 ಮತ್ತು 2 ನೇ ಎದುರುದಾರ ಪರ ಶ್ರೀ ಜಿ.ಎಂ.ಎಸ್. ವಕೀಲರ ಪರ ಶ್ರೀಮತಿ ಕೆ.ಬಿ.ಕೆ. ವಕೀಲರಿಂದ –**

ವಕೀಲರು ಹಾಜರಿದ್ದು, ಕಾಲಾವಕಾಶ ಕೋರುತ್ತಿದ್ದು, ಕಾಲಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

Date : 21.07.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಪಾಟೀ ಸವಾಲು – 1 ಮತ್ತು 2 ನೇ ಎದುರುದಾರ ಪರ ಶ್ರೀ ಜಿ.ಎಂ.ಎಸ್. ವಕೀಲರಿಂದಃ**

ಅರ್ಜಿಯಲ್ಲಿ ಕಾಣಿಸಿದ ಜಮೀನಿನಲ್ಲಿ ಹಾಲಿ ಮೆಕ್ಕೆಜೋಳವನ್ನು ಬಿತ್ತಿರುತ್ತೇವೆ. ಸದರಿ ಅರ್ಜಿಯಲ್ಲಿ ಕಾಣಿಸಿದ ಜಮೀನು ಖುಷ್ಕಿ ಜಮೀನು ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಆಸ್ತಿಯಲ್ಲಿ ಎದುರುದಾರರು ಟವರ್ ನಿರ್ಮಾಣ ಮಾಡಿದ ಬಾಬ್ತು ನಿಮಗೆ ಪರಿಹಾರವೆಂದು ರೂ.2,30,000/– ಹಣ ಪಾವತಿಸಿರುವರೆಂದು ಸೂಚಿಸಲಾಗಿ, ಹೌದು, ಹಣ ಪಾವತಿಸಿರುತ್ತಾರೆ. ಆದರೆ, ಎದುರುದಾರರು ಜಮೀನಿನಲ್ಲಿ ಟವರ್ ನಿರ್ಮಿಸುವ ಕಾಲಕ್ಕೆ ಆ ಜಮೀನಿನಲ್ಲಿ ಇದ್ದ ಬೆಳೆಯ ನಷ್ಟದ ಬಾಬ್ತು ಪರಿಹಾವೆಂದು ಆ ಹಣವನ್ನು ಎದುರುದಾರರು ನಮಗೆ ಪಾವತಿಸಿರುವರೆಂದು ಸಾಕ್ಷಿ ಹೇಳುತ್ತಾರೆ. ಎದುರುದಾರರು ನಮಗೆ ರೂ.1,01,520/– ಮತ್ತು ರೂ.42,300/– ಹಣವನ್ನು ಎದುರುದಾರರು ನಮಗೆ ಬೆಳೆ ನಷ್ಟ ಪರಿಹಾರವೆಂದು ಪಾವತಿಸಿರುವರು ಎಂದರೆ ಸರಿ. ಎದುರುದಾರರು ಅರ್ಜಿಯಲ್ಲಿ ಕಾಣಿಸಿದ ಜಮೀನಿನಲ್ಲಿ ಟವರ್ ನಿರ್ಮಿಸಿದ ಬಾಬ್ತು ರೂ.2,30,000/– ಹಾಗೂ ಭೂಮಿಯ ಅಪ ಮೌಲ್ಯವೆಂದು ರೂ.7,20,000/– ಹಣ ನಮಗೆ ಪಾವತಿಸಿರುವರು ಎಂದರೆ ಸರಿಯಲ್ಲ.

2. ಎದುರುದಾರರು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶಕ್ಕೆ ಅನುಗುಣವಾಗಿ ಮೇಲೆ ಹೇಳಿದಷ್ಟು ಹಣವನ್ನು ನಮಗೆ ಪರಿಹಾರವೆಂದು ನೀಡಿದ್ದು, ಅದು ಸೂಕ್ತ ಇರುವುದೆಂದರೆ ಸರಿಯಲ್ಲ. ಸದರಿ ಹಣವನ್ನು ಪಡೆಯುವಾಗ ನಾವು ಯಾವುದೇ ತಕರಾರು ಮಾಡದೇ, ಕರಾರಿಗೆ ಸಹಿ ಮಾಡಿ, ಆ ಹಣವನ್ನು ಒಪ್ಪಿ ಪಡೆದುಕೊಂಡಿರುವೆವು ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕಾಣಿಸಿದಂತೆ ಎದುರುದಾರರು ನಮ್ಮ ಜಮೀನಿನಲ್ಲಿ ವಿದ್ಯುತ್ ಲೈನ್ ಎಳೆಯುವ ಮೊದಲು, ಆ ಜಮೀನಿನಲ್ಲಿ 66 ಕೆ ವಿ ಸಾಮರ್ಥ್ಯದ ವೈರ್ ಆ ಮೊದಲೇ ಆ ಜಮೀನಿನಲ್ಲಿ ಎಳೆಯಲಾಗಿತ್ತು ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕಾಣಿಸಿದಂತೆ ಎದುರುದಾರರು ನಮ್ಮ ಜಮೀನಿನಲ್ಲಿ ವಿದ್ಯುತ್ ಲೈನ್ ಎಳೆಯುವ ಮೊದಲು, ಆ ಜಮೀನಿನಲ್ಲಿ 66 ಕೆ ವಿ ಸಾಮರ್ಥ್ಯದ ವೈರ್ ಆ ಮೊದಲೇ ಆ ಜಮೀನಿನಲ್ಲಿ ಎಳೆಯಲಾಗಿದ್ದು ಅದರಿಂದ ಆ ವೈರ್ ನ್ನು ತೆಗೆದು ಎದುರುದಾರರು ಅರ್ಜಿಯಲ್ಲಿ ಕಾಣಿಸಿದ ಸಮಯದಲ್ಲಿ 220 ಕೆ ವಿ ಸಾಮರ್ಥ್ಯದ ವೈರ್ ಎಳೆದಿರುವರು ಎಂದರೆ ಸರಿಯಲ್ಲ.

3. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಅರ್ಜಿಯಲ್ಲಿ ಕಾಣಿಸಿದ ಜಮೀನಿನ ಮೌಲ್ಯ 1 ಎಕರೆಗೆ ರೂಪಾಯಿ 1 ಕೋಟಿ ಇತ್ತೆಂದು ತೋರಿಸಲು ಮತ್ತು ಎದುರುದಾರರು ಆ ಜಮೀನಿನಲ್ಲಿ ಟವರ್ ನಿರ್ಮಿಸಿ ಲೈನ್ ಎಳೆದ ಕಾರಣ ನನಗೆ 1 ಎಕರೆಗೆ ರೂಪಾಯಿ 1 ಕೋಟಿ ನಷ್ಟ ವಾಗಿರುವುದೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿಯಲ್ಲ. ಅದೇ ರೀತಿ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಅರ್ಜಿಯಲ್ಲಿ ಕಾಣಿಸಿದ ಜಮೀನಿನಲ್ಲಿ ಬೆಳೆದ ಬೆಳೆಯಿಂದ ನನಗೆ ವಾರ್ಷಿಕ

ರೂ.2,00,000/- ಆದಾಯ ಬರುತ್ತಿತ್ತೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿಯಲ್ಲ.

4. ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ನಾಲ್ಕು ದಿಕ್ಕಿನಲ್ಲಿ ಬೇರೆಯವರ ಮಾಲೀಕತ್ವದ ಜಮೀನುಗಳು ಇರುವವು ಎಂದರೆ ಸರಿ. ಈಗಾಗಲೇ ಎದುರುದಾರರು ನನಗೆ ಪಾವತಿಸಿದ ಹಣ ಸೂಕ್ತವಿದ್ದು, ಅದರಿಂದ ಅರ್ಜಿಯಲ್ಲಿ ಕೋರಿದಂತೆ ಎದುರುದಾರರು ನನಗೆ ಎಷ್ಟು ಹಣವನ್ನು ಪರಿಹಾರವೆಂದು ಕೊಡಲು ಭಾಧ್ಯರು ಇರುವುದಿಲ್ಲವೆಂದರೆ ಸರಿಯಲ್ಲ. ಅರ್ಜಿಯಲ್ಲಿ ಕಾಣಿಸಿದ ಆಸ್ತಿಯಲ್ಲಿ ಮೊದಲಿಗೆ 66 ಕೆ ವಿ ಸಾಮರ್ಥ್ಯ ದ ವಿದ್ಯುತ್ ಲೈನ್ ಎಳೆದಿದ್ದು, ಈಗ ಎದುರುದಾರರು ಅದನ್ನು ತೆಗೆದು ಅದೇ ಸ್ಥಳದಲ್ಲಿ 220 ಕೆ ವಿ ಸಾಮರ್ಥ್ಯ ದ ವಿದ್ಯುತ್ ಲೈನ್ ಎಳೆದಿದ್ದು, ಅದರಿಂದ ಎದುರುದಾರರು ನಮಗೆ ಎಷ್ಟು ಪರಿಹಾರ ಕೊಡಲು ಭಾಧ್ಯರು ಇಲ್ಲ ಮತ್ತು ಅರ್ಜಿಯಲ್ಲಿ ಕೋರಿದಂತೆ ಎದುರುದಾರರಿಂದ ಪರಿಹಾರವೆಂದು ಹಣ ಪಡೆಯಲು ಅರ್ಹರಿರುವುದಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.